ಸರ್ಕಾರಕ್ಕೆ ಕೂಡ ಮನವರಿಕೆಯಾಗಿತ್ತು. ಇವತ್ತು ನಮ್ಮ ಬೆಂಗಳೂರು ನಗರದ ಹೆಬ್ಬಾಳ್‌ನಲ್ಲಿ ಒಂದೇ ಕಡೆ ಕೃಷಿ ವಿಶ್ವವಿದ್ಯಾನಿಲಯವಿದ್ದರೆ ಆಗುವುದಿಲ್ಲ. ಆದ್ದರಿಂದ ತಾವು ಧಾರವಾಡ ನಗರದಲ್ಲಿ ಕೂಡ ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರೆ ಒಳ್ಳೆಯದು. ಇದರಿಂದ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಪಂಜಾಬ್‌ನಲ್ಲಿ ಎರಡು ಮೂರು ವಿಶ್ವವಿದ್ಯಾನಿಲಯಗಳು ಇವೆ ಎಂದು ನಾನು ಕೇಳಿದ್ದೇನೆ. ಪಂಜಾಬಿನಲ್ಲಿ ೨-೩ ಕೃಷಿ ವಿಶ್ವವಿದ್ಯಾನಿಲಯಗಳಿವೆ ಬಾಂಬೆಯಲ್ಲಿ ಎರಡು ಇವೆ. ನಮ್ಮಲ್ಲಿ ಅವಶ್ಯಕವಾಗಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾಗಿದೆ ಎಂದು ಅವರು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅದೇನೆಂದರೆ, ಕೃಷಿ ಪದವೀಧರರಿಗೆ, ವೈದ್ಯಕೀಯ ಪದವೀಧರರಿಗೆ ಸಿಗುವಷ್ಟು ವೇತನ ದೊರೆಯಬೇಕೆಂದು ಹೇಳುತ್ತೇನೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೇಷ್ಮೆಗೆ ಸಂಬಂಧಪಟ್ಟ ವಿಷಯವನ್ನು ಅಧ್ಯಯನ ಮಾಡಲು ವಿಶೇಷ ಅವಕಾಶವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇವನ್ನು ಐಚ್ಛಿಕ ವಿಷಯಗಳನ್ನಾಗಿ ಸೇರಿಸಬೇಕೆಂದು ಹೇಳುತ್ತೇನೆ. ಇವರ ಸಣ್ಣ ಪುಟ್ಟ ಬೇಡಿಕೆಗಳು ಏನಿವೆ ಅದನ್ನು ಸರ್ಕಾರ ಬೇಗ ಈಡೇರಿಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸದಸ್ಯರು ವಿದ್ಯಾರ್ಥಿಗಳ ಕೆಲವು ಸಾಮಾನ್ಯ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಕೃಷಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಇದೇ ತರಹದ ಕೆಲವು ಬೇಡಿಕೆಗಳನ್ನು ಇಟ್ಟಿದ್ದರು ಅವುಗಳನ್ನೆಲ್ಲ ಪರಿಹಾರ ಮಾಡಿ ಸಮಾಧಾನ ಮಾಡಿ ಅವರು ತಮ್ಮ ಸಂಪನ್ನು ವಾಪಸ್ಸು ತೆಗೆದುಕೊಂಡಿದ್ದಾರೆಂಬ ಮಾತನ್ನು ಅವರು ನೆನಪಿಸಿಕೊಳ್ಳುತ್ತಾರೆಂದು ಹೇಳುತ್ತೇನೆ. ಎರಡನೇ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಒಳ್ಳೆಯದು. ಈಗ ಇರತಕ್ಕ ಒಂದು ವಿಶ್ವವಿದ್ಯಾನಿಲಯ ಸಾಲದು ಎಂದು ಏನು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ ಅದರ ಬಗ್ಗೆ ವರದಿ ತರಿಸಬೇಕು ಮತ್ತು ತಜ್ಞರ ಅಭಿಪ್ರಾಯವನ್ನು ಕೇಳಬೇಕು.

ಶ್ರೀ ಎಸ್. ಭೀಮಣ್ಣ ಖಂಡ್ರೆ .—ವರದಿ ಬಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರಕ್ಕೆ ಇದರಿಂದ ಹಣ ಖರ್ಚಾಗುವುದರಿಂದ ಅದರ ಪ್ರಯೋಜನ ಏನು ಎಂಬುದನ್ನು ಎಲ್ಲ ದೃಷ್ಟಿಕೋನದಲ್ಲಿ ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಪರಿಶೀಲಿಸುತ್ತೇನೆಂದು ಹೇಳುವುದಕ್ಕೆ ಇಷ್ಟವಷ್ಟಿದ್ದೇನೆ.

VIII) ಬಿದರ್ ಹಳ್ಳಿಯ ಬೆಳ್ಳೂರು ಜನತಾ ಕಾಲೋನಿಯಲ್ಲಿ ವಿದ್ಯುತ್ ದೀಪ ಪ್ರಾರಂಭೋತ್ಸವಕ್ಕೆ ಸ್ಥಳೀಯ ಶಾಸಕರನ್ನು ಆಹ್ವಾನಿಸದೇ ಇರುವ ಬಗ್ಗೆ.

ಶ್ರೀ ಎನ್. ಚಿಕ್ಕೇಗೌಡ.—ಈ ಸದನದಲ್ಲಿ ಅನೇಕ ಸಾರಿ, ರಾಮಕೃಷ್ಣ ಹೆಗಡೆಯವರ ಸರ್ಕಾರ ಬಂದನಂತರ ಯಾರೇ ಮಂತ್ರಿಗಳು ಅಧಿಕೃತ ಸಮಾರಂಭಕ್ಕೆ ಹೋಗಲಿ ಅಲ್ಲಿನ ಸ್ಥಳೀಯ ಶಾಸಕರನ್ನು ಪಾಲ್ಗೊಳ್ಳುವಂತೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಮುಖ್ಯ ಮಂತ್ರಿಗಳು ಸದನದಲ್ಲಿ ಇಲ್ಲದೇ ಹೋದರೂ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ, ೩೦-೩-೨೪ರಲ್ಲಿ ವಿದ್ಯುತ್ ಮತ್ತು ಅಬ್ಕಾರಿ ಮಂತ್ರಿಗಳಾದ ಜೆ ಹೆಚ್. ಪಟೇಲರು ನನ್ನ ಕ್ಷೇತ್ರಕ್ಕೆ ಹೋಗಿ ಬೆಳ್ಳೂರು ಎಂಬ ಗ್ರಾಮದಲ್ಲಿ ಜನತಾ ಕಾಲೋನಿಯಲ್ಲಿ ಬೀದಿ ದೀಪಗಳ ಪ್ರಾರಂಭೋತ್ಸವವನ್ನು ಮಾಡಿದ್ದಾರೆ. ಆ ಸಮಾರಂಭಕ್ಕೆ ಎಲ್ಲರೂ ಜನತಾ ಪಾರ್ಟಿಯವರೇ ಸೇರಿದ್ದಾರೆ. ಅದಕ್ಕೆ ಸಂಬಂಧಪಟ್ಟ ಆಹ್ವಾನ ಪತ್ರಿಕೆನನ್ನ ಹತ್ತಿರ ಇದೆ. ಅವರು ಜನತಾ ಕಾಲೋನಿಯ ಬೀದಿ ದೀಪಗಳ ಉದ್ಘಾಟನೆ ಮಾಡಿಸುವ ಸಂದರ್ಭದಲ್ಲಿ ಜನತಾ ಪಕ್ಷದ ಅಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದರು, ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಜನತಾ ಪಕ್ಷದ ಮಾಜಿ ಶಾಸಕರು ಹೀಗೆ ಎಲ್ಲಾ ಜನತಾ ಪಕ್ಷದವರನ್ನೇ ಕಾರ್ಯಕ್ರಮಕ್ಕೆ ಬರಮಾಡಿಕೊಂಡಿದ್ದರು. ಮಾಡಿಕೊಳ್ಳಲಿ, ಆಭ್ಯಂತರ ಇಲ್ಲ. ಜನತಾ ಪಕ್ಷದವರು ಹೋಗಿ ಜನತಾ ಪಕ್ಷದ ಕಾರ್ಯಕ್ರಮವನ್ನು ನಡೆಸುವುದಕ್ಕೆ ಆಭ್ಯಂತರ ಇಲ್ಲ. ಆದರೆ ವಿದ್ಯುದ್ದೀಪ ಪ್ರಾರಂಭೋತ್ಸವ ಮಾಡಿ ಅಧಿಕಾರಿಗಳನ್ನು ಸೇರಿಸಿಕೊಂಡು ಪಾರ್ಟಿ ಮಾಡುತ್ತಾರೆ ಎಂದು ನನ್ನ ಆಪಾದನೆ.

ಅಧ್ಯಕ್ಷರು.—ಯಾವ ವಿದ್ಯುದ್ದೀಪವನ್ನು ಕೊಟ್ಟಿದ್ದಾರೆ.]